IJRESS Volume 1, Issue 1(October, 2011) (ISSN 2249-7382)
International Journal of Research in Economics and Social Sciences

# ಯುದ್ಧದ ಪರಿಕಲ್ಪನೆ – ಸಾಹಿತ್ಯ ಮತ್ತು ಮಹಾಸತಿಗೀತೆಗಳು (ಮಧುಗಿರಿ ಮಹಾನಾಡಿಗೆ ಸಂಬಂಧಿಸಿದಂತೆ)

ಡಾ. ಆರ್.ಕಾವಲ್ಲಮ್ಮ

# The Concept of War in Literature and Mahasathi Geetha's with Special Reference to Madhugiri Mahanadu

Dr. R.Kavallamma
Associate Professor
Dept. of History,
Govt. Arts College
Bangalore-560001

ಯುದ್ಧದ ಪರಿಕಲ್ಪನೆ ನೆನ್ನೆ ಮೊನ್ನೆಯದಲ್ಲ ಮಾನವ ಜೀವನಾರಂಭದಿಂದಲೂ ಒಂದಲ್ಲ ಒಂದು ಕಾರಣಕ್ಕೆ ತನ್ನ ನೆರೆಹೊರೆಯವರೊಂದಿಗೆ ಸಂಘರ್ಷಿಸುತ್ತಲೇ ಬೆಳೆದಿದ್ದಾನೆಂದರೆ ಸುಳ್ಳಲ್ಲ. ಆದರೆ 'ಯುದ್ಧ'ಕ್ಕೆ ಖಚಿತ ಸ್ವರೂಪ ಸಿಕ್ಕಿರುವುದು ರಾಜ್ಯ ರಚನೆಯ (Formation of State) ನಂತರವೆ. ಸಿಂಧೂ ನಾಗರೀಕತೆಯ ನಾಶಕ್ಕೆ ನೀಡುವ ಕಾರಣಗಳಲ್ಲಿ ಪರಕೀಯರ ದಾಳಿಯೂ ಒಂದಾಗಿದೆ. ವೇದಗಳಲ್ಲಿ ಬರುವ ಇಂದ್ರನ ಉಲ್ಲೇಖವು ದೇವದಾನವರ ಬಲಾಬಲಗಳ ಸಂಕೇತವಾಗಿದೆ. ರಾಜಸೂಯ, ವಾಜಪೇಯ, ಅಶ್ವಮೇಧ ಮುಂತಾದ ಯಜ್ಞಯಾಗಾದಿಗಳ ಆಚರಣೆಗಳು ರಾಜ್ಯದ ಮತ್ತು ರಾಜನ ಪರಮಾಧಿಕಾರದ ಪ್ರತೀಕವಾಗಿದೆ. ರಾಮಾಯಣ ಮತ್ತು ಮಹಾಭಾರತಗಳಲ್ಲಿ ಯುದ್ಧದ ವಿವಿಧ ಸಂದರ್ಭಗಳ ದೀರ್ಘ ವಿವರಣೆಗಳಿವೆ. ಕನ್ನಡ ಕಾವ್ಯಗಳಲ್ಲಿಯೂ ಹಲವಾರು ಸಂದರ್ಭದಲ್ಲಿ ಯುದ್ಧಗಳ ಬಗೆಗೆ, ಯುದ್ಧ ಕಲೆಗಳ ಬಗೆಗೆ ಸಾಕಷ್ಟು ವಿವರಗಳು ದೊರೆಯುತ್ತವೆ. ಕೃತಿಗಳಲ್ಲಿರುವಂತೆಯೇ ಶಾಸನಗಳು ಕೂಡ ನಮಗೆ ರಣರಂಗದ ಪರಿಚಯವನ್ನು ವಿಸ್ತೃತವಾಗಿ ಕಣ್ಣಿಗೆ ಕಟ್ಟುವಂತೆ ನೀಡುತ್ತವೆ. ಕಾವ್ಯಗಳು ಹಾಗೂ ಶಾಸನಗಳು ಯುದ್ಧದ ಚಿತ್ರಣವನ್ನು ಶಬ್ಧಗಳಲ್ಲಿ ವರ್ಣಿಸಿದರೆ, ಲಭ್ಯವಿರುವ ಸಹಸ್ರಾರು ವೀರಗಲ್ಲುಗಳು ರಣರಂಗದ ಚಿತ್ರಣವನ್ನು ದೃಶ್ಯ ಮಾಧ್ಯಮದ ಮೂಲಕ ಅತ್ಯಂತ ಪರಿಣಾಮಕಾರಿಯಾಗಿ ವಿವರಿಸುತ್ತವೆ.

'ಯುದ್ಧ' ವೆಂದಾಕ್ಷಣ ರಾಜ ರಾಜರ ನಡುವೆ ನಡೆದ ಸಂಘರ್ಷವೆಂದೇ ಹೆಚ್ಚಾಗಿ ಭಾವಿಸಲಾಗಿದೆ. ಆದರೆ ಯುದ್ಧದ ಕಾರಣಗಲನ್ನು ವಿಶ್ಲೇಷಿಸಿದಾಗ ಬೇರೆ ಬೇರೆ ಉದ್ದೇಶಗಳಿಗಾಗಿ ಬೇರೆ ಬೇರೆ ಸ್ವರೂಪದ

ಯುದ್ಧಗಳು ಸಂಭವಿಸಿರುವುದು ಕಂಡುಬರುತ್ತದೆ. ಅವುಗಲನ್ನು ಸ್ಥೂಲವಾಗಿ ಕೆಲವುಗಳನ್ನು ಹೀಗೆ ಪಟ್ಟಿ ಮಾಡಬಹುದಾಗಿದೆ.

1. ರಾಜಕೀಯ ಉದ್ದೇಶಕ್ಕಾಗಿ, ಇತರರ ಮೇಲೆ ಪ್ರಾಬಲ್ಯ ಹೊಂದಲು ಅಥವಾ ಗಡಿ ವಿಸ್ತರಣೆಗಾಗಿ ಯುದ್ಧಗಳು ಹೆಚ್ಚಾಗಿ ಸಂಭವಿಸಿವೆ. ಇಂತಹ ಯುದ್ಧಗಳು ಮೊದಲೇ ನಿರ್ಧರಿತವಾಗಿರುತ್ತಿದ್ದವು. ಇಲ್ಲಿ ಯುದ್ಧ ಕಲೆಗೆ, ತಾಂತ್ರಿಕ ಕೌಶಲ್ಯಕ್ಕೆ ಹೆಚ್ಚು ಒತ್ತು ನೀಡಿ ಯೋಜನಾ ಬದ್ಧವಾಗಿರುತ್ತಿದ್ದವು.
2. ತಮ್ಮ ರಾಜ್ಯದ ಮೇಲೆ ಎರಗಿ ಬಂದ ಹಠಾತ್ ದಾಳಿಗಳಿಂದ ರಕ್ಷಿಸಿಕೊಳ್ಳಲು ನಡೆಸಿದ ಹೋರಾಟಗಳು ಸಾಕಷ್ಟಿವೆ. ಇಲ್ಲಿ ತನ್ನ ವೈರಿಯು ಯುದ್ಧಕ್ಕೆ ಸಿದ್ಧನಿಲ್ಲವೆಂಬ ಭರವಸೆ, ಆಕ್ರಮಣ ಮಾಡುವ ಅರಸನಿಗೆ ತಿಳಿದಿದ್ದರೆ, ಸುಲಭವಾಗಿ ತನ್ನ ಶತ್ರುವನ್ನು ಸೋಲಿಸಬಹುದು. ಆದರೆ ಇಂತಹ ಆಕಸ್ಮಿಕ ಆಕ್ರಮಣಕ್ಕೆ ತುತ್ತಾದವರು ತಮ್ಮನ್ನು ತಾವು ರಕ್ಷಿಸಿಕೊಳ್ಳುವ ದೃಷ್ಟಿಯಿಂದ ತಮ್ಮ ಜೀವನದ ಹಂಗನ್ನು ತೊರೆದು ಹೋರಾಡುವ ಅನಿವಾರ್ಯಕ್ಕೆ ಸಿಲುಕುತ್ತಿದ್ದರು.
3. ಸಂಪತ್ತಿನ ಕ್ರೂಢೀಕರಣದ ಉದ್ದೇಶದಿಂದ ನೆರೆಹೊರೆಯವರ ಮೇಲೆ ದಾಳಿಗಳನ್ನು ಮಾಡುವುದು ಸಾಮಾನ್ಯದ ಸಂಗರಿಯಾಗಿರುವುದು ಕಂಡುಬರುತ್ತದೆ. ಇಂತಹ ದಾಳಿಗಳು 'ಊರುಳುವು', 'ಗೋಗ್ರಹಣ', 'ಪೆಣ್ಬುಯ್ಯಲ್' ಮುಂತಾದ ಘಟನೆಗಳಲ್ಲಿ ಕಾಣಬಹುದು.

ಆಸ್ತಿ, ಸ್ತ್ರೀ, ದನ-ಕರುಗಳ ರಕ್ಷಣೆಗಾಗಿ ಶತ್ರುಗಳ ಜೊತೆ ಹೋರಾಡುತ್ತಿರುವ ಸಾವಿರಾರು ಶಿಲ್ಪಗಳು ಲಭ್ಯವಿದೆ. ಪ್ರಾಚೀನ ಕಾವ್ಯಗಳಲ್ಲಿಯೂ ಈ ಬಗ್ಗೆ ಸಾಕಷ್ಟು ಉಲ್ಲೇಖಗಳಿವೆ. ರನ್ನ ಕವಿಯು ತನ್ನ 'ಗದಾಯುದ್ಧ' ಕೃತಿಯಲ್ಲಿ ಹೀಗೆ ಹೇಳಿದ್ದಾನೆ;

ತಱುಗೋಳೊಳ್ ಪೆಣ್ಬುಯ್ಯಲೊ
ಳೆಱೆವೆಸದೊಳ್ ನಂತನೆಡಱ್ಱೊಳೊರಱಿವಿನೊಳಂ
ತಱಿಸಂದು ಗಂಡುತನಮೆ
ನೆಱಪದವಂ ಗಂಡನಲ್ಲನೆಂತುಂಷಂಡ[1]

ಮೇಲಿನ ಪದ್ಯದ ಆಧಾರದಿಂದ ಆ ಕಾಲದಲ್ಲಿ ತುರುಗಳನ್ನು ರಕ್ಷಿಸುವುದು, ಸ್ತ್ರೀಯರ ಮಾನ ರಕ್ಷಿಸುವುದು, ಊರುಗಳನ್ನು ರಚಿಸುವುದು ಗಂಡಸರ ಪರಮ ಕರ್ತವ್ಯವಾಗಿತ್ತೆಂದು ತಿಳಿಯಾಹುದಾಗಿದೆ. ಪಂಪನ ವಿಕ್ರಮಾರ್ಜುನ ವಿಜಯದಲ್ಲಿಯೂ ಸಹ ಇಂತಹ ವಿವರಗಳಿವೆ. ಹಾಗೆಯೇ ಶಾಸಗಳಲ್ಲಿ ಬರುವ ಈ ಶ್ಲೋಕ;

"ಜೀತೇನ ಲಭಯ್ತೇ ಲಕ್ಷ್ಮಿ ಮೃತೇನಾಪಿ ಸುರಾಂಗನಾ ।

ಕ್ಷಣವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇರಣೇ ॥[2]

ಜಯಶಾಲಿಯಾದರೆ ಲಕ್ಷ್ಮಿ ಲಭಿಸುತ್ತಾಳೆ. ಮೃತನಾದರೆ ಸುರಾಮ್ಗನೆಯರು ದೊರೆಯುತ್ತಾರೆ. ನಿಮಿಷದಲ್ಲಿ ಅಳಿಯುವ ಈ ದೇಹಕ್ಕೆ ಕಾಳಗದಲ್ಲಿ ಅಳಿಯುವನೆಂಬ ಕೊರಗೇಕೆ? ಎಂದು ಹೇಳುವುದರ ಮೂಲಕ ಈ ಶ್ಲೋಕವು ಬದುಕಿನ ಬಗ್ಗೆ ಭ್ರಮಎಯನ್ನು ಕಲ್ಪಿಸುತ್ತದೆ ಎಂದರೆ ತಪ್ಪಾಗಲಾರದು.

ಸ್ಥಾಪನೆಯಾದ ಎಲ್ಲಾ ರಾಜ್ಯಗಳು ದೀರ್ಘಕಾಲ ಉಳಿಯುವುದು ಕಷ್ಟಸಾಧ್ಯವಾಗಿತ್ತು. ರಾಜ ತನ್ನ ರಾಜ್ಯದ ಆಡಳಿತದ ಸಮಗ್ರತೆಯನ್ನೂ, ಪ್ರಭುತ್ವವನ್ನೂ ಉಳಿಸಿಕೊಳ್ಳಬೇಕಾದರೆ ಅವನ ಸರ್ಕಾರವು ಸದಾ ಜಾಗರೂಕವಾಗಿರಬೇಕಿತ್ತು. ಇದು ಸಾಧ್ಯವಾಗಬೇಕಾದರೆ ರಾಜನಿಗೆ ಸೈನ್ಯ ಮತ್ತು ರೈತರ ನಿರಂತರ ಬೆಂಬಲವಿರಬೇಕು. ಬಾಲ್ಯಾವಸ್ಥೆಯಲ್ಲಿದ್ದ ಪ್ರಭುತ್ವಗಳಿಗೆ ಸುಲಭದ ಸೈನ್ಯ ಕಟ್ಟುವುದು ಸುಲಭದ ಮಾತೇನು ಆಗಿರಲಿಲ್ಲ. ಆದ್ದರಿಂದಲೇ ವೀರರ ಮನಸ್ಸಿನ ಮೇಲೆ ಪರಿಣಾಮ ಬೀರಿ ಸ್ವಯಂ ಪ್ರೇರಿತರಾಗಿ ಹೋರಾತದ ಮನೋಭಾವ ಬೆಳೆಸಿಕೊಳ್ಳಲು ಸಂದರ್ಭಗಳನ್ನು ಕಲ್ಪಿಸಿ ಅವನನ್ನು ಅಸಾಮಾನ್ಯನನ್ನಾಗಿಸಲು ಈ ಉಕ್ತಿಗಳು ಪರಿಣಾಮಕಾರಿಯಾಗಿವೆ. ಇದರಿಂದ ರಾಜ್ಯಗಳು ತಮ್ಮ ಉಳಿವಿಗಾಗಿ ಬಲಿಷ್ಟ ಮತ್ತು ಸುರಕ್ಷಿತ ರಕ್ಷಣಾ ವ್ಯವಸ್ಥೆಯನ್ನು ರೂಪಿಸಿಕೊಳ್ಳಲು ಇತ್ತೀಚಿನವರೆಗೂ ಸಾಧ್ಯವಾಗಿದೆ.

ಪ್ರಸ್ತುತ ಲೇಖನದ ಉದ್ದೇಶ ಮಧುಗಿರಿ ಮಹಾನಾಡಿಗೆ ಸಂಬಂಧಿಸಿದ ಸಾಹಿತ್ಯ ಮತ್ತು ಮಹಾಸತಿಗೀತೆಗಳಲ್ಲಿ ಯುದ್ಧದ ಪರಿಕಲ್ಪನೆ ಹೇಗಿದೆ ಎಂಬುದಾಗಿದೆ. ಈ ವಿಷಯವೇನು ಹೊಸದಲ್ಲ, ಆದರೆ ಸಾಹಿತ್ಯ ಮತ್ತು ಶಾಸನಗಳು ಯುದ್ಧವನ್ನೂ, ವೀರರನ್ನೂ ವೈಭವೀಕರಿಸಿದ್ದಾವೆ. ಯುದ್ಧದಲ್ಲಿ ಗೆದ್ದರು ಹೆಣ್ಣು, ಸತ್ತರು ಹೆಣ್ಣು ಒಲಿಯುತ್ತಾಳೆಂಬ ಭ್ರಮೆಯನ್ನು ಹುಟ್ಟಿಸಿರುವುದೇ ಹೆಚ್ಚಾಗಿ ಕಾಣುತ್ತದೆ. ಸಾಮಾನ್ಯ ಜನರ ಬದುಕಿನಲ್ಲಿ ಯುದ್ಧದ ಕಲ್ಪನೆಯೇ ಭಯಾನಕವಾಗಿರುವಂತೆ ಸತಿಗೀತೆಗಳಲ್ಲಿ ವ್ಯಕ್ತವಾಗಿದೆ. ಆಸ್ಥಾನಗಳಲ್ಲಿ ಕುಳಿತು ಯುದ್ಧಗಳನ್ನು ಕಣ್ಣಾರೆ ಕಂಡು ಕೃತಿ ಮತ್ತು ಶಾಸನಗಳಲ್ಲಿ ಕವಿಗಳು ಅದನ್ನು ರೋಚಕವಾಗಿ ವಿವರಿಸಿದ್ದಾರೆ. ಆದರೆ ಸೈನಿಕರು ಯುದ್ಧದ ಭೀಕರತೆಯನ್ನು ಸ್ವತಃ ಅನುಭವಿಸಿ ಮರಣವನ್ನು ಹೊಂದುತ್ತಾರೆ. ಇಂತಹ ವೀರಸತಿಯರು ಸ್ವಯಂಪ್ರೇರಿತವಾಗಿಯೇ ಅಥವಾ ಅನಿವಾರ್ಯವಾಗಿಯೋ ಜೀವಂತ

ದಹನವಾಗಲು ಮುಂದಾಗುತ್ತಾರೆ. ಆ ಕ್ಷಣದಲ್ಲಿ ಅನುಭವಿಸುವ ಸಾವಿನ ಯಾತನೆ ಮತ್ತು ಸೈನಿಕನನ್ನು ಮದುವೆ ಆಗಿರುವುದು ಸಂತೋಷವೇನಲ್ಲ ಎಂಬ ಅಂಶಗಳು ಸತಿಗೀತೆಗಳಲ್ಲಿ ವ್ಯಕ್ತವಾಗಿವೆ. ಈ ವಿಚಾರಗಳನ್ನು ಸಾಂದರ್ಭಿಕವಾಗಿ ಇಲ್ಲಿ ಚರ್ಚಿಸಲಾಗಿದೆ.

ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ನೂರಾರು ಚಿಕ್ಕಚಿಕ್ಕ ರಾಜಕೀಯ ಘಟಕಗಳು ಅಸ್ಥಿತ್ವಕ್ಕೆ ಬಂದಿವೆ. ಈ ರಾಜಕೀಯ ಘಟಕಗಳು ತಮ್ಮದೇ ಆದ ಒಂದು ರಾಜಕೀಯ ನೆಲೆಯನ್ನು ಕಂಡುಕೊಳ್ಳಲು ಸದಾ ಇತರರೊಂದಿಗೆ ಸೆಣಸಾಡಬೇಕಾಗಿತ್ತು. ಅದರಲ್ಲೂ ತಾಳಿಕೋಟೆ ಯುದ್ಧದ ನಂತರ ಉದ್ಭವಿಸಿದ ರಾಜಕೀಯ ಸ್ಥಿತ್ಯಂತರ ಈ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುವಂತೆ ಮಾಡಿತ್ತು. ಈ ಕಾಲಘಟ್ಟದಲ್ಲಿ ಏಳಿಗೆಗೆ ಬಂದ "ಮಧಿಗಿರಿ ಮಹಾನಾಡ ಪ್ರಭುಗಳು" ಸುಮಾರು ನಾಲ್ಕುಶತಮಾನಗಳ ದೀರ್ಘ ಆಡಳಿತ ನಡೆಸಿದ್ದಾರೆ. ವಿಜಯನಗರದ ಅರಸರ ಪರಮನಿಷ್ಠರಾದ ಇವರು, ಅಷ್ಟೇನು ಯುದ್ಧಪ್ರಿಯರಾಗಿರಲಿಲ್ಲ. ಆದರೂ ರಾಯದ ರಕ್ಷಣೆಯ ದೃಷ್ಟಿಯಿಂದ ಹಾಗೂ ಎದುರಾಗುತ್ತಿದ್ದ ದಾಳಿಗಳನ್ನು ಸಮರ್ಥವಾಗಿ ಎದುರಿಸುತ್ತಿದ್ದರು ಎಂಬುದಕ್ಕೆ ಇವರು ಪ್ರಸಿದ್ಧ ದೊರೆ ಇಮ್ಮಡಿ ಚಿಕ್ಕಭೂಪಾಲನ ಆಸ್ಥಾನ ಕವಿಯಾದ ಮಲ್ಲಿಕಾರ್ಜುನನು "ಇಮ್ಮಡಿ ಚಿಕ್ಕಭೂಪಾಲ ಸಾಂಗಾತ್ಯ"ವೆಂಬ ಐತಿಹಾಸಿಕ ಕೃತಿಯನ್ನು ರಚಿಸಿದ್ದಾನೆ. ಈ ಕೃತಿಯು ಮೂರು ತಲೆಮಾರುಗಳ ನಾಲ್ಕು ಜನ ಪ್ರಮುಖ ದೊರೆಗಳ ಕಾಲದಲ್ಲಿ ನಡೆದ ಅನೇಕ ಐತಿಹಾಸಿಕ ಘಟನೆಗಳನ್ನು ವಿವರಿಸುತ್ತದೆ. ಅದರಲ್ಲೂ ಮುಖ್ಯವಾಗಿ ಅವತಿ ನಾಡಪ್ರಭು ಹಾವಳಿಭೈರೇಂದ್ರನು ಪೆನುಗೊಂಡೆಯಿಂದ ಆಳುತ್ತಿದ್ದ ವಿಜಯನಗರದರಸು ವೆಂಕಟಪತಿರಾಯರು ಇಲ್ಲದ ಸಮಯವನ್ನು ನೋಡಿ ಪೆನುಗೊಂಡೆಗೆ ಮುತ್ತಿಗೆ ಹಾಕಿದನು. ಅಲ್ಲದೆ ಅವರ ಪರಿವಾರವನ್ನು ಹಿಡಿತು ತಂದು ಬಂಧಿಸಿ ಅವರನ್ನು ಹಿಂಸಿಸಿದನು. ಜೊತೆಗೆ ರಾಯರ ಮನ್ನಣೆ ಪಡೆದಿದ್ದ ಸೊಕ್ಕಿದ ಆನೆಗಳನ್ನು, ಲಾಯದಲ್ಲಿದ್ದ ಜಾತಿ ಕುದುರೆಗಳನ್ನು ಅಪಹರಿಸಿ ರಾಯ ಭಂಡಾರವನ್ನು ತೆಗೆಸಿ ರಾಯಭೂಷಣ 18 ಲಕ್ಷ ವಿತ್ತವನ್ನು ದೋಚುತ್ತಾನೆ.3 ಈ ವಿಚಾರವನ್ನು ತನ್ನ ಗುಪ್ತಚಾರದಿಂದ ತಿಳಿದ ಮಧುಗಿರಿ ಮಹಾನಾಡ ಪ್ರಭು, ಪ್ರಭುನಿಷ್ಟನಾದ ಇಮ್ಮಡಿ ಚಿಕ್ಕಭೂಪಾಲನು ಕೋಪಗೊಂಡು ರಾಯ ಕಾರ್ಯಕ್ಕೆ ಮುಂದಾಗಿ ಹಾವಳಿ ಭೈರೇಂದ್ರ ಕೃತ್ಯವನ್ನು ಖಂಡಿಸಿ ಅವನಿಗೆ ಎಚ್ಚರಿಕೆಯನ್ನು ನೀಡುತ್ತಾನೆ. ಆದರೂ ಬುದ್ಧಿ ಕಲಿಯದ ಭೈರೇಂದ್ರ ಬದಲಾಗಿ ಪೆನುಗೊಂಡೆಯಲ್ಲಿ ತಾನು ಅಧಿಕಾರಕ್ಕೆ ಬರಲು ಸಹಾಯ

ಮಾಡಿದರೆ ನೀನು ಹೇಳಿದಂತೆ ಕೇಲುವೆನಲ್ಲದೆ ಅನೇಕ ಪ್ರದೇಶಗಳನ್ನು ಬಿಟ್ಟು ಕೊಡುವುದಾಗಿ ಇಮ್ಮಡಿ ಚಿಕ್ಕ ಭೂಪಾಲನಿಗೆ ಆಸೆ ತೋರಿಸುತ್ತಾನೆ. ಆಮಿಷಕ್ಕೆ ಒಳಗಗದ ಚಿಕ್ಕಪ್ಪಗೌಡರು ಸ್ವಾಮಿ ಕಾರ್ಯವಾಗಿರುವುದರಿಂದ ಪ್ರಾಣವನ್ನಾದರೂ ತೆತ್ತು ಕೀರ್ತಿ ತನ್ನ ನೆರೆಯ ಸಮಾನ ದೊರೆಗಳೊಂದಿಗೆ ಸೇರಿ ಹಾವಳಿಭೈರೇಂದ್ರನ ವಿರುದ್ಧ ಹರುವೆಯ ಕಾಳಗ ಮಾಡುತ್ತಾನೆ.

ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ ಕೃತಿಯ ಕೇಂದ್ರಬಿಂದುವೇ ಈ ಹರುವೆಕೋಟೆ ಕಾಳಗ. ಆದ್ದರಿಂದ ಈ ಕೃತಿಯುದ್ಧಕ್ಕೂ 'ವೀರರಸ' ತೆರೆ ತೆರೆಯಾಗಿ ಕಾವ್ಯದ ಅಂಚು ಅಂಚುಗಳನ್ನು ತಟ್ಟುತ್ತದೆ. ಉದಾಹರಣೆಯಾಗಿ ರಾಜನಾದವನಿಗೆ ವಿಶೇಷ ಅರ್ಹತೆಗಳಿರಬೇಕು ಅವು;

ಧನ ಧಾನ್ಯ ವಸ್ತವಾಹನ ಪುತ್ರಸನ್ಮಿತ್ರ
ರನುಚರ ದಾಸಿಯರೆಂಬ
ಘನತರಷ್ಟ ವಿಭೂತಿಯೊಳಿರ್ಪಾ
ತನೆ ಮನುಜೇಂದ್ರನೆನಿಪನು[4]

ನಿಯತೋಪಾಯ ಚತುಷ್ಟಯ ಶಕ್ತಿ
ತ್ರಯತಂತ್ರ ಪಂಚಕವೆಂಬ
ಜಯವೊದವಿದ ವರ್ಗತ್ರಯದಿಂದೆನೀ
ರ್ಭಯನಾಗಿರಬೇಕು ನೃಪನು.[5]

ಸಾಮಾನ್ಯ ಜನರ ಮತ್ತು ಆಳುವ ಪ್ರಭುವಿನ ನಡುವೆ ಸ್ಥಾನಮಾನಗಳಲ್ಲಿ ಅಂತರವಿರಬೇಕು ಆಗ ಮಾತ್ರ ರಾಜನೆನಿಸಲು ಸಾಧ್ಯ. ಅರಸರು ತಮ್ಮ ಪ್ರಜೆಗಳನ್ನು ಸಮಾಜದ ವ್ಯವಸಾಯವನ್ನು ಹಾಗೂ ನೆರೆಹೊರೆಯ ರಾಜ್ಯಗಳ ದಾಳಿಗಳಿಂದ ರಕ್ಷಿಸಲು ಸೂಕ್ತವಾದ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕೆಂಬ ಅಂಶವನ್ನು ಎಲ್ಲ ರಾಜನೀತಿಶಾಸ್ತ್ರಗಳು ತಿಳಿಸುತ್ತವೆ. ಆದ್ದರಿಂದ ರಾಜನಾದವನು ಚತುಷ್ಟಯಗಳಾದ ಸಾಮ, ದಾನ, ಭೇದ ಮತ್ತು ದಂಡೋಪಾಯಗಳನ್ನು ಶಕ್ತಿತ್ರಯಗಳಾದ ಮಂತ್ರಶಕ್ತಿ, ಉತ್ಸಾಹಶಕ್ತಿ ಮತ್ತು ಪ್ರಭುಶಕ್ತಿಗಳನ್ನು ಹೊಂದಿರಬೇಕು. ಐಹೊಳೆ ಶಾಸನವು ಇಮ್ಮಡಿ ಪುಲಿಕೇಶಿ ತನ್ನ ಚಿಕ್ಕಪ್ಪ ಮಂಗಳೇಶನ ಮೇಲೆ ಮಂತ್ರಶಕ್ತಿ ಮತ್ತು ಉತ್ಸಾಹ ಶಕ್ತಿಗಳನ್ನು ಪ್ರಯೋಗ ಮಾಡಿ ಪ್ರಭುಶಕ್ತಿಯನ್ನು ಪಡೆದನೆಂದು ವಿವರಿಸುವುದನ್ನು ಇಲ್ಲಿ ಸ್ಮರಿಸಬಹುದು.

ಅರಸೆಂಬ ತರಸಿಗೆ ರಾಜ್ಯ ಬಲಗಳೆಂ

ಬೆರಡು ಬಟ್ಟಲು ಸಮನಾಗಿ
ಯಿರದರೊಳಗೊಂದ ಹೆಚ್ಚು ಕುಂದಾದೊಡೆ
ದೊರೆತನ ನೆಲೆದಪುವುದು[6]

ಈ ಪದ್ಯವು ರಾಜನು ರಾಜ್ಯದ ಕಡೆಗೆ ಹೆಚ್ಚು ಗಮನ ಹರಿಸಬೇಕೆಂಬುದನ್ನು ಸೂಚ್ಯವಾಗಿ ಹೇಳುತ್ತದೆ. ಅರಸನೆಂಬ ತಕ್ಕಡಿಗೆ ರಾಜ್ಯ ಮತ್ತು ಸೇನೆ ಎರಡು ಬಟ್ಟಲುಗಳಿದ್ದಂತೆ. ಈ ಎರಡು ಬಟ್ಟಲುಗಳಲ್ಲಿ ಯಾವುದಾದರೂ ಒಂದಕ್ಕೆ ಕೊರತೆಯುಂಟಾದರೂ ಅಂತಹ ರಾಜನ ಅಧಿಕಾರ ನೆಲಗಚ್ಚುವುದೆಂದು ತಿಳಿಸುತ್ತದೆ. ಅಂದರೆ ರಾಜನ ಪದವಿ ಸುಖದ ಸುಪ್ಪತ್ತಿಗೆಯಾದರೂ ಸದಾ ಅವರ ಸಮತೋಲನ ಕಾಯ್ದುಕೊಳ್ಳಲು ಶ್ರಮಿಸಬೇಕು. ಇಲ್ಲವಾದರೆ ಸುಲಭವಾಗಿ ಅಂತಹ ರಾಜ್ಯ ಅವನತಿಯ ಹಾದಿಯನ್ನು ಹಿಡಿಯುವುದರಲ್ಲಿ ಸಂಶಯವಿಲ್ಲ.

ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ ಕೃತಿಯ 12 ರಿಂದ 17ನೇ ಸಂಧಿಗಳಲ್ಲಿ ಸೈನ್ಯ ಸಂಗ್ರಹಣೆ, ಸಮರಸಿದ್ಧತೆ, ಕೋಟೆಕಾಳಗ, ಯುದ್ಧ ತಂತ್ರಗಳು, ಬಳಸುವ ಶಸ್ತ್ರಾಸ್ತ್ರಗಳು, ಸೈನ್ಯ ನಿರ್ವಹಣೆ ಮತ್ತು ಕೋಟೆಯ ಲಕ್ಷಣಗಳನ್ನು ಕುರಿತು ಸಾಕಷ್ಟು ಮಾಹಿತಿ ಒದಗಿಸುತ್ತದೆ. ಸೈನ್ಯದ ಸಾಧನೆಗಳನ್ನು ಉತ್ಪ್ರೇಕ್ಷೆಯಿಂದಲೇ ಹೇಳಲಾಗಿದೆಯಾದರೂ ಅಂದಿನ ಪಾಳೆಯಗಾರರ ನಡುವೆ ಸಂಭವಿಸುತ್ತಿದ್ದ ಯುದ್ಧ ಮತ್ತು ರಣರಂಗದ ಒಟ್ಟಾರೆ ಚಿತ್ರಣವನ್ನೂ ಪರಿಪ್ರಿಯಾಗಿ ನಮ್ಮ ಕಣ್ಮುಂದೆ ಚಿತ್ರಿಸುತ್ತದೆ. ಇದಕ್ಕೆ ಪೂರಕವೆಂಬಂತೆ ವೀರಗಲ್ಲುಗಳಲ್ಲಿ ಕಂಡುಬರುವ ಕತ್ತಿ ಕಾಳಗ, ಕುದುರೆ ಕಾಳಗ, ಗಜ ಕಾಳಗ, ಬಿಲ್ಲಾಳು, ಗುರಾಣಿ, ಬರ್ಜಿ ಮತ್ತು ಈಟಿ ಮುಂತಾದ ಆಯುಧಗಳನ್ನು ಹಿಡಿದಿರುವ ಶಿಲ್ಪಗಳು “ಯುದ್ಧದ ಪರಿಕಲ್ಪನೆ”ಯನ್ನು ಮಾಡಲು ತುಂಬಾ ಸಹಾಯಕವಾಗಿವೆ.

ಇಮ್ಮಡಿ ಚಿಕ್ಕಭೂಪಾಲ ಸಾಮ್ರಾಜ್ಯ ನಿರ್ಮಾಪಕ ಮತ್ತು ಯುದ್ಧ ವೀರನಾಗಿದ್ದರಿಂದ ಹರಪಿಯ ಕೋಟೆಕಾಳಗದಲ್ಲಿ ಪರಾಕ್ರಮಿಯಂತೆ ಹೋರಾಡುತ್ತಾನೆಂದು ಕವಿ ಬಣ್ಣಿಸಿದ್ದಾನೆ. ಹಾಗೆ ಯುವರಾಜ ತೋಟೇಂದ್ರ ಪ್ರಳಯ ಕಾಲ ಭೈರವನಂತೆ ತುರುಗ, ಮದಕರಿ ಸೈನಿಕರನ್ನು ಕಡಿದು ಬಣವೆಯೊಟ್ಟಿದ ರಣಾಂಗಣ, ತೋಟೇಂದ್ರನ ರಣಪರಾಕ್ರಮವನ್ನು ಮೆಚ್ಚಿದ ವೈರಿ ಸೈನಿಕರು ‘ರಣ ಕೋವಿದ ತೋಟೇಂದ್ರ ಗುಣಕೆ ಮತ್ಸರವುಂಟೆ’ ಎಂದು ಕೀರ್ತಿಸುತ್ತಿದ್ದಾಗ ಹುಲಿಯಂತೆ

ಧೀಂಕಿಟ್ಟು ಎದುರು ಬರುತ್ತಿರುವ ಕುದುರೆ ದಳವನ್ನು ತುಂಡರಿಸಿ ಮೋಡದಂತೆ ಕವಿದ ಶರಜಾಲವನ್ನು ಗಿರಿಯಂತೆ ಎದುರಿಸಿ ಸೊಕ್ಕಿದಾನೆಗಳನ್ನು ಸೀಳುತ್ತಲೇ "ಶಿವನೊಳೊಂದಿದನಾಕುವರ" ಎಂದು 15ನೇ ಸಂಧಿ ಸಂಪೂರ್ಣವಾಗಿ ತೋಟೇಂದ್ರನ ಪರಾಕ್ರಮವನ್ನು ವಿವರಿಸಿದೆ.

ಈ ಕಾಲಘಟ್ಟದಲ್ಲಿ ರಾಜ್ಯಗಳ ಉಳವಿಗಾಗಿ ನಿರಂತರ ಯುದ್ಧಗಳು ನಡೆಯುತ್ತಿದ್ದರು, ಸೋಲು ಗೆಲುವುಗಳು ಸಹ ಸಾಮಾನ್ಯವಾಗಿದ್ದವು. ಆದರೆ ಸಾಹಿತ್ಯ ಕೃತಿಗಳು ಮತ್ತು ಶಾಸನಗಳಲ್ಲಿ ಯುದ್ಧ ಮಾಡಿ ನಾಡನ್ನು ರಕ್ಷಿಸುವವನೇ ಶ್ರೇಷ್ಠ ಸರ್ವೋತ್ತಮನೆಂಬ ಹೊಗಳಿಕೆಗಳು ತುಂಬಿರುವುದನ್ನು ಈ ಮೇಲಿನ ವಿವರಣೆಗಳಿಂದ ತಿಳಿಯಬಹುದಾಗಿದೆ. ಆದರೆ ಇದೇ ನಾಡಿನಲ್ಲಿ ದೊರೆತಿರುವ ಮಹಾಸತಿ ಗೀತೆಗಳಲ್ಲಿರುವ ಯುದ್ಧದ ವಿವರಗಳನ್ನು ಹಾಗೂ ಸತಿ ಆಚರಣೆಯ ವಿವರಗಳನ್ನು ಗಮನಿಸಿದರೆ ನೋವಿನ ಧ್ವನಿ, ಯುದ್ಧದ ಬಗ್ಗೆ ತಿರಸ್ಕಾರ ಅಥವ ವಿರೋಧಾ ಭಾವಗಳು ನಮಗೆ ಸಿಗುತ್ತವೆ. ಮಹಾಸತಿಇಯ ಮದುವೆ ನಿಶ್ಚಯದೊಂದಿಗೆ ಸಾಮಾನ್ಯವಾಗಿ ಸತಿಗೀತೆಗಳಲ್ಲಿ ಕಥೆ ಪ್ರಾಂಭವಾಗುತ್ತದೆ. ಇಲ್ಲಿಯೂ ಗಂಡನಾದವನು ವೀರನೆಂದೂ ಇತರರಿಗಿಂತ ಶ್ರೇಷ್ಠ ಮತ್ತು ಅಸಾಮಾನ್ಯನೆಂದೇ ಬಿಂಭಿತವಾಗಿದೆ. ಆದರೆ ಮದುವೆ ನಿಶ್ಚಯದ ಮೊದಲು ಹೆಣ್ಣಿನ ಕಡೆಯವರು ಹಾಗೂ ವಧು ಕೂಡ ಗಂಡು ಸೈನಿಕರಾಗಿರುವುದರಿಂದ ಮದುವೆಗೆ ಒಪ್ಪುವುದು ಬೇಡವೆಂದೇ ವ್ಯಕ್ತಪಡಿಸುತ್ತಾರೆ. ಅಂತಹ ವಿರೋಧ ಭಾವನೆಗಳ ವ್ಯಕ್ತ ಈ ಪದ್ಯಗಳಿಂದ ತಿಳಿಯಬಹುದಾಗಿದೆ.

ಕೊಟ್ಟನಂದವರಣ್ಣ ಕೊಡೆನೆಂದ ಒಬ್ಬಣ್ಣ
ಪಟ್ಟಾಸಲ್ಯಾ ಅವ್ವ ಇರಿಯಣ್ಣ । ಕುತಕಂಡು
ಕೊಟ್ನೆಂದು ಈಳ್ಯಾವ ಇಡಿದವನೆ ॥
ಬಳೆಯ ತೊಡುವಾಗ ಬಲಗಡೆಯ ಸೀತಾವು
ಬಾಗುಲಾಗ ಗೌವುಳ ನುಡುದಾವೆ । ಸಂದನೋರ
ಬಾಲ ಕಾಳುಗದಲ್ಲಿ ಬುಡುದಾನೋ ॥[7]

ಮದುವೆ ನಿಶ್ಚಯದ ಸಮಯದಲ್ಲಿ ಬಳೆ ತೊಡಿಸುವಾಗ ಯಾರೋ ಸೀನುವುದು, ಕುಪ್ಪಸ ತೊಡಿಸುವಾಗ ಬೆಕ್ಕು ಅಡ್ಡ ಬರುವುದು, ಬಾಗಿಲಿನ ಹಲ್ಲಿಗಳು ನುಡಿಯುವ ಶಕುನಗಳು ಮುಂದಾಗುವ ವೀರ(ಗಂಡ)ನ ಮರಣದ ಸೂಚ್ಯವಾಗಿ ಹೇಳುತ್ತವೆ. ಆದರೆ ಬೆಟ್ಟದ ಮೇಲಿನ ಬ್ರಾಹ್ಮಣ "ಲಗ್ನವ ಮಾಡಮ್ಮ ಚೆನ್ನಾಗಿ ಇರುವುದು" ಎಂದು ಹೊತ್ತಿಗೆಯನ್ನು ತೆಗೆದು ಹೇಳುತ್ತಾನೆ. ಈ ಮೂಲಕ ಪರೋಕ್ಷವಾಗಿ ವೈದಿಕ ಪರಂಪರೆಯ ಕಟುವಾದ ವ್ಯಂಗ್ಯವೊಂದನ್ನು ಇಲ್ಲಿ ಗಮನಿಸಬಹುದು. ಮನಸ್ಸಿನ ಅಂತರಾಳದಿಂದ ಹೊರಟ ಸಂಜ್ಞೆಗಳಿಗೂ, ಜಾಣ್ಮೆ, ಬುದ್ಧಿವಂತಿಕೆ ಮತ್ತು ಕುಟಿಲತನದಿಂದ ಹೊರಟ ಮಾತುಗಳಿಗೂ ಸ್ಪಷ್ಟವಾದ ವಿರೋಧವನ್ನೇ ಇಲ್ಲಿ ಕಾಣಲು ಸಾಧ್ಯವಿದೆ.[8]

ಆರು ವರ್ಷದ ನಾಗಮ್ಮನಿಗೆ ಹತ್ತು ವರ್ಷದ ವಡ್ಡಗೆರೆ ಈರಣ್ಣನೊಂದಿಗೆ ವಿವಾಹವಾಗುತ್ತದೆ. ಆನಂತರ ಈರಣ್ಣ ಸೈನಿಕನಾಗುತ್ತಾನೆ. ಒಂದು ದಿನ ಯುದ್ಧದ ಕರೆ ಬಂದಾಗ ಈರಣ್ಣ "ತೊತ್ತಿನ ಮಗನ ಜಗಲ ಕೋಗಬೇಕು ಕತ್ತಿಗೆಪ್ಪಣೆ ಕೊಡೆ ತಾಯಿ" ಎಂದು ಕೇಳುತ್ತಾನೆ. ತಾಯಿ ಯುದ್ಧಕ್ಕೆ ಅಪ್ಪಣೆ ಕೊಡುತ್ತಾಳೆ. ಅತ್ತೆ ಸೊಸೆಯರಿಬ್ಬರು ಹೊಲದಲ್ಲಿ ಹತ್ತಿ ಬಿಡಿಸುವಾಗ ಸೊಸೆಗೆ ಬಾಯಾರಿಕೆಯಾಗುತ್ತದೆ. ಪಕ್ಕದ ಹಳ್ಳದಲ್ಲಿ ನೀರಿಗಾಗಿ ಚಿಲುಮೆ ತೋಡುತ್ತಾಳೆ, ಆಗ ಚಿಲುಮೆಯಲ್ಲಿ ರಕ್ತ ಕಾಣಿಸುತ್ತದೆ. ತಲೆ, ಕತ್ತಿಗಳು ದೊರೆಯುತ್ತವೆ. ಇದನ್ನು ಕಂಡ ನಾಗಮ್ಮ ಅತ್ತೆಮ್ಮ ನಿನ್ನ ಮಗ ಯುದ್ಧದಲ್ಲಿ ಮಡಿದಪ್ರೇ ಎಂದು ಸತಿಯಾಗಲು ನಿಶ್ಚಯಿಸುತ್ತಾಳೆ. ಸತಿಯಾಗುವ ಮುನ್ನ ತನ್ನನ್ನು ವೀರನೊಬ್ಬನಿಗೆ ಮದುವೆ ಮಾಡಿ ಕೊಟ್ಟದ್ದಕ್ಕಾಗಿ ಶಾಪ ಹಾಕುವ ಪ್ರಸಂಗ ಹೀಗಿದೆ;

ಒಡ್ಡಗೆರೆಂಬೂದು ದೊಡ್ಡ ಪಟ್ಟನವೆಂದು
ಕತ್ತೀಗೆ ಧಾರೆ ಎರದಾರೆ
ಬಡವರ ಮನೆಗೆ ನನ್ನ ಕೊಟ್ಟಿದ್ದರೆ
ಕೂಲಿ ಮಾಡನ್ನ ಉಣುವೆನು ನನ್ನ ತವರೋರು
ಕೊಂಡಾಕ್ಕೆ ಧಾರೆ ಎರೆದಾರು ॥

ತಿರಿದುಂಬ ಜೋಗಿಗೆ ಕೊಟ್ಟಿದ್ದರೆ
ತಿರಿದುಂಡು ನಾನು ಇರುತ್ತಿದ್ದೆ
ವಡ್ಡಗೆರೆಂಬೋದು ದೊಡ್ಡಪಟ್ಟಣವೆಂದು
ಕತ್ತಿಗೆ ಧಾರೆ ಎರೆದರೆ ನನ್ನ ತವರೋರು

ಕೊಂಡಾಕ್ಕೆ ಧಾರೆ ಎರೆದಾರು । ತವರೋರು
ನನ್ನ ಕೊಟ್ಟೋರ ಮನೆ ಉರಿಯಲಿ ಬೇಯಾಲಿ ॥[9]

ಇಲ್ಲಿ ಸೈನಿಕರನ್ನು ಮದುವೆಯಾಗಿರುವುದಕ್ಕೆ ವೇದನೆ ಹಾಗೂ ಈ ವಿವಾಹ ಮಾಡಿದ ತನ್ನ ತವರಿನ ಬಗ್ಗೆ ತಿರಸ್ಕಾರದ ಧ್ವನಿ ಎದ್ದು ಕಾಣುತ್ತದೆ. ಕೊಂಡಕ್ಕೆ ಹಾಯಲು ಸಿದ್ಧಳಾದ ನಗಮ್ಮನನ್ನ ಅವಳ ತಂದೆ ಶಿವಯ್ಯನು ಸೀರೆಯನ್ನು ತೆಗೆದುಕೊಂಡು ಬಂದು "ಹತ್ತು ವರಹ ಕೊಡುತ್ತೇನೆ" ಕೊಂಡಕ್ಕೆ ಹಾರಬೇಡವೆಂದರೂ, ಮನೆಯ ಎಲ್ಲ ಸದಸ್ಯರು ಸಹ ಕೊಂಡಕ್ಕೆ ಹಾರಬೇಡವೆಂದು ಹೇಳದರೂ ನಾನ್ಹಾಯೂದೇ ಲೇಸು ಅಡಿಗಿಚ್ಚ ಎಂದು ನಿಶ್ಚಯ ಮಾಡುತ್ತಾಳೆ. ಡಾ.ಬಸವರಾಜ ಕಲ್ಗುಡಿಯವರು "ಇಲ್ಲಿಯ ದಹನದ ಕಥೆಯ ಹೋರಾಟದ ಬಣಗಳಗೆ ಸೇರಿದ ವ್ಯಕ್ತಿಗಳದ್ದೇ ಆಗಿದೆ. ಕೆಳವರ್ಗದ ಬಡ ಹೋರಾಟದ ಬಣಗಳಗೆ ಸೇರಿದ ಇಂಥ ವರ್ಗಗಳ ಸಹಗಮನದ ಸಂಖ್ಯೆಯೇ ಅಪಾರವಾಗಿದ್ದರಿಂದ ಇವುಗಳಲ್ಲಿ ಬಹಳಷ್ಟು ದಾಖಲೆಗೆ ಸಿಗದೆ ಹೋದವು. ಕೆಲವು ಮಾಸ್ತಿಗೀತೆಗಳಲ್ಲಿ ಈ ಕತ್ತಿ ಹಿಡಿದು ಹೋರಾಡುವ ವ್ಯಕ್ತಿಯಂಥವನಿಗೆ ಮದುವೆ ಮಾಡಿದ್ದೇಕೆ? ಎಂದು ಅತ್ಯಂತ ವೇದನೆ, ಶೋಕದಿಂದ ಹೇಳುವ ಅಭಿಪ್ರಾಯವಿದು" ಎಂದಿದ್ದಾರೆ.[10]

ಸತಿಯು ನೀಡುವ ಶಾಪದ ಮಾತುಗಳು ಹಾಗೂ "ನಾನ್ಹಾಯೂದೀ ಲೇಸು ಅಡಗಿಚ್ಚ" ಎಂಬ ನಿರ್ಧಾರಗಳ ಹಿಂದಿರುವ ಭಾವನೆ ಯುದ್ಧದ ಭೀಕರತೆ ಮತ್ತು ಸತಿಸಹಗಮನದ ಅನಿವಾರ್ಯವಾಗಿರುವುದನ್ನೇ ಹೇಳುತ್ತದೆ. ಕ್ರಿ.ಶ.1612[11] ರ ಶಾಸನ ಹಾಗೂ ಚಿಕ್ಕಮಲ್ಲಮ್ಮನನ್ನು ಕುರಿತ ಗೀತೆಯು ಚಿಕ್ಕಮಲ್ಲಮ್ಮನು ಮುಸಲ್ಮಾನರ ದಾಳಗೆ ಸಿಕ್ಕಿ ಅವರಿಂದ ತಪ್ಪಿಸಿಕೊಂಡು ಬಂದು ತಮ್ಮ ಕುಲದೈವವಾದ ಮಿಡಿಗೇಶಿ ಮಲ್ಲೇಶ್ವರನ ಮುಂದೆ ಅಗ್ನಿಪ್ರವೇಶ ಮಾಡಿದ ಬಗ್ಗೆ ವಿವರಿಸುತ್ತವೆ.

ಯುವರಾಜ ತೋಟೇಂದ್ರನಿಗೆ ಪರವೆಂಗಳ ಸೋದರ ಕುಮಾರರಾಮನೇ ಆದರ್ಶ, ಕುಮಾರರಾಮನಿಗೆ ಚಕ್ರವ್ಯೂಹವನ್ನು ಭೇದಿಸಿದ ಅಭಿಮನ್ಯುವು ಆದರ್ಶಪುರುಷನಾಗಿ ಕಾಣುತ್ತಾನೆ. ಯುವರಾಜ ತೋಟೇಂದ್ರ 'ತಂದೆಯ ನಿರದಾಹವ ಕಟ್ಟಿ ಮನೆಯೊಳು ನಿಂದಡೆ ಲೋಕ ಮೆಚ್ಚುವುದೇ ಎಂದು ತಾಯಂದಿರನ್ನು ಕಾಡಿ ಬೇಡಿ ತಂದೆಗೆ ಸಹಾಯ ನೀಡಲು ಯುದ್ಧಕ್ಕೆ ಹೊರಡುತ್ತಾನೆ. ಅವನ ಜನನಿಯರು ಮಂಗಳಾರತಿಯನ್ನೆತ್ತಿ 'ವಿಜಯಾಂಗನೆಯ

ನೀನಾಳೂ ಕಂದಯ್ಯ, ಸಮರಾಂಗಣವನ್ನು ಜಯಿಸು' ಎಂದು ಹರಸುತ್ತಾರೆ. ಮಡಿದ ಗಂಡನನ್ನು ಅನುಸರಿಸಿ ತೋಟೇಂದ್ರನ ಹೆಂಡತಿ ಚನ್ನಬಸಮ್ಮ ಸ್ವರ್ಗದಲ್ಲಿ ಮತ್ತೆ ಪತಿಯನ್ನು ಸೇರುವೆನೆಂದು ಸಂತೋಷದಿಂದ ಸತಿಯಾಗುತ್ತಾಳೆಂದು ಕೃತಿ ವಿವರಿಸುತ್ತದೆ. ವೀರನಲ್ಲದವನನ್ನು ಜನರು ಕೀಳಾಗಿ ನೋಡುತ್ತಿದ್ದ ಬಗ್ಗೆ ಕೃತಿಗಳಲ್ಲಿ ಚಿತ್ರಿತವಾಗಿದೆ.

ಸೂಳೆಯರೋಲಗದೊಳು ತಮ್ಮ ಪಂತವ
ಹೇಳಕೊಳುತೆ ರಣದೊಳಗೆ
ತೋಳ ಬಲ್ಮೆಯ ತೋರರರಿಯದ ಹೇಡಿ
ಸೂಳೆಯ ರೋಲಗದೊಳು ಪೊಗಳಕೊಂಡು
ಕಾಳಗವೆನಲೆದೆಗುಂದಿ

ಪರಾಕ್ರಮಿಯಲ್ಲದವನು ಕೇವಲ ವೇಶ್ಯೆಯರ ಓಲಗದಲ್ಲಿ ಹೊಗಳಸಿಕೊಳ್ಳುವುದಕ್ಕಷ್ಟೇ ಸರಿ ಎಂಬ ವ್ಯಂಗ್ಯ ಇಲ್ಲಿ ಎದ್ದು ಕಾಣುತ್ತದೆ.[12]

ದೊಡ್ಡಮನೆಗೆ ಸೊಸೆಯಾಗಿ ಹೋದ ಹೆಣ್ಣು ಮಗಳೊಬ್ಬಳು ತನ್ನ ಗಂಡ ದಂಡಿಗೆ ಹೋದಾಗ ತಾನು ತವರಿಗೆ ಹೊಗಿ ಬರುವುದಾಗಿ ಅತ್ತೆ ಮಾವನನ್ನು ಕೇಳುತ್ತಾಳೆ. ಅತ್ತೆ ಮಾವಮ್ದಿರು ಮನೆಯ ಇತರ ಸದಸ್ಯರಾದ ಭಾವ, ಮೈದುನ, ನಾದಿನಿಯನ್ನು ಕೇಳ ಹೋಗಿ ಬಾ ಎಂದು ಹೇಳುತ್ತಾರೆ. ಎಲ್ಲರ ಅನುಮತಿಯನ್ನೂ ಪಡೆದ ಆಕೆ ಹೊರಟು ನಿಂತಾಗ ತನ್ನ ಅತ್ತೆ ಮಾವಂದಿರು ಸೊಸೆಗೆ ತಾಕಿತು ಮಾಡುತ್ತಾರೆ. ಅದು;

ತವರಿಗೆ ಹೊರಟಿರುವ ಎಲೆಬಾಲೆ
ನೀ ಹೊಗಿ ಬೇಗ ಭಾರವ । ಸೊಸೆ ಮುತ್ತೇ
ತವರೊಳ್ಳೆದೆಂದು ನಿಲಬ್ಯಾಡ ॥

ತವರೊಳ್ಳೆದೆಂದು ನಿಲಬ್ಯಾಡ ಎಲೆಮಗಳೆ
ನೆರೆ ಒಳ್ಳೆದೆಂದು ನಗಬ್ಯಾಡ । ಎಲೆ ಮಗಳೆ
ಹೂ ಒಳ್ಳೇವೆಂದು ಮುಡಿಬ್ಯಾಡ ॥13

ಇಲ್ಲಿ ತನ್ನ ಗಂಡ ಯುದ್ಧಕ್ಕೆ ಹೋಗಿರುವ ಪ್ರಯುಕ್ತ ಅವನು ಹಿಂತಿರುಗಿಬರುವ ಶಂಕೆ ಬಹುಶಃ ಆಕೆಯಲ್ಲಿರುವಂತಿದೆ. ಆದ್ದರಿಂದ ಒಮ್ಮೆ ತವರಿಗೆ ನನ್ನವರನ್ನು ನೋಡಿಕೊಂಡು ಬರಲು ಆಶಿಸುವುದು ಇಲ್ಲಿ ಸಹಜವಾಗಿದ್ದರೂ, ಗಂಡನ ಮನೆಯವರ ಮಾತುಗಲಲ್ಲಿ ಆಕೆ ಹಿಂತಿರುಗಿ ಬರುತ್ತಾಳೋ ಇಲ್ಲವೋ ಎಂಬ ಸಂಶಯವಿದ್ದಂತೆ ಕಾಣುತ್ತದೆ. ಜೊತೆಗೆ ಇಲ್ಲಿರುವ ತಾಕೀತಿನ ಮಾತುಗಳು ಹೆಣ್ಣುಗಂಡನ ಮನೆಯಲ್ಲಿರುವುದೇ ಸಮಾಜದ ನೀತಿ ಎಂಬಂತಿದೆ. ಇದರಿಂದ ವೀರನಿಗೆ ಯುದ್ಧ ಅನಿವಾರ್ಯವಾದರೆ ಹೆಂಡತಿಗೆ ಮಾರನಹೋಮ ಅನಿವಾರ್ಯವೆಂಬಂತೆ ಇಲ್ಲಿ ವ್ಯಕ್ತವಾಗುತ್ತದೆ.

ಹೀಗೆ ಸ್ತ್ರೀಯನ್ನು ಪೂಜ್ಯನೀಯಳು, ದೇವತೆ ಎಂದೆಲ್ಲಾ ವೈಭವೀಕರಿಸುವ ಸಮಾಜ ತನ್ನೊಳಗೆ ಅವಳನ್ನು ಹೇಯಕರ ಮಾರಣಹೋಮಕ್ಕೆ ಗುರಿಮಾಡುತ್ತಿದ್ದದು ಶೋಚನೀಯ. ಮಧಿಗಿರಿ ಮಹಾನಾಡಿನಾದ್ಯಂತ ದೊರೆಯುವ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು ಯುದ್ಧದ ಅನಿವಾರ್ಯತೆ ಮತ್ತು ಅದರಿಂದುಂಟಾದ ಪರಿಣಾಮವನ್ನೇ ಹೇಲುತ್ತವೆ. ಹಾಗೆ ಮಹಾನಾಡಿಗೆ ಸೇರಿದ ಭಕ್ತರಹಳ್ಳಿಯ ಕಾವಲಮ್ಮ, ವಡ್ಡಗೆರೆ ನಾಗಮ್ಮ, ಮಿಡಿಗೇಶಿ ಕನ್ನೇರಮ್ಮ ಮತ್ತು ಚಿಕ್ಕಮಲ್ಲಮ್ಮ, ತಾಡಿನಾಗಮ್ಮ, ಮುಂತಾದ ಸತಿಯರ ಬಲಿದಾನದ ಕಥೆಗಳು ಜನ್ಪದರ ಬಾಯಲ್ಲಿ ವೀರಗಾಥೆಗಳಾಗಿ ಹೊರಹೊಮ್ಮಿದೆ. ಸತಿಯಾದ ವಡ್ಡಗೆರೆ ನಾಗಮ್ಮ ಈ ಪ್ರದೇಶದ ಜನತೆಗೆ ದೇವತೆಯಾಗಿ, ವಕ್ಕಲು ದೇವತೆಯಾಗಿ, ಸಂತಾನ ಭಾಗ್ಯ ನೀಡುವ ಮಾತೆಯಾಗಿ ಜನಪದರ ಜೀವನದಲ್ಲಿ ಹಾಸುಹೊಕ್ಕಾಗಿದ್ದಾಳೆ. ಒಟ್ಟಾರೆ ಈ ಲೇಖನದ ಆಶಯ ಸಾಹಿತ್ಯದಲ್ಲಿ ಯುದ್ಧವೀರನನ್ನು ಆದರ್ಶ ಪುರುಷನನ್ನಾಗಿ ತೋರಿಸುತ್ತಾ ಮುಂದಿನವರಿಗೆ ಯುದ್ಧದ ಬಗ್ಗೆ ಭ್ರಮೆಯ ಬದುಕಿನ ಕಲ್ಪನೆಯನ್ನು ಕೊಡುತ್ತಾ ಹೋದರೆ ಮಹಾಸತಿ ಗೀತೆಗಳಲ್ಲಿ ನೇರವಾಗಿ ಯುದ್ಧದ ಭೀಕರತೆಗೆ ಸಿಲುಕಿ ದಳ್ಳುರಿಯನ್ನು ಹಾಯುವ ನೋವು, ವೇದನೆಗಳ ಧ್ವನಿ ಧ್ವನಿತವಾಗಿರುವುದೇ ಕಂಡುಬರುತ್ತದೆ.

**ಅಡಿಟಿಪ್ಪಣಿಗಳು :**

1. ರನ್ನ : ಸಾಹಸಭೀಮ ವಿಜಯಂ, 3-35
2. ಎ.ಕ.VII, ಶಿಕಾರಿಪುರ, 83-1058
3. ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ, 13-79
4. ಮಲ್ಲಿಕಾರ್ಜುನ ಕವಿ, ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ 12-23
5. ಅದೇ, 12-64
6. ಅದೇ 7-76 ಮತ್ತು 80
7. ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ 7-87
8. ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ : ಒಂದು ಅಧ್ಯಯನ, ಪು.227
9. ಅದೇ, 69
10. ಅದೇ, 365
11. ಎ.ಕ.XVI, ಮಧುಗಿರಿ 117
12. ಕಾವಲಮ್ಮ.ಆರ್., ಮಧುಗಿರಿ ಮಹಾನಾಡುಪ್ರಭುಗಳು, ಬೆಂಗಳೂರು, 2005, ಪು.171
13. ಶ್ರೀಮತಿ ದಿ.ನರಸಮ್ಮ ಮತ್ತು ಸಂಗಡಿಗರು (ರೆಡ್ಡಿಹಳ್ಳಿ ಗ್ರಾಮ) ಹಾಡಿನ ಜನಪದ ಗೀತೆಗಳ ಸಂಗ್ರಹದಿಂದ ಆಯ್ದುಕೊಳ್ಳಲಾಗಿದೆ. ಈ ಲೇಖನವನ್ನು ಸಿದ್ಧಪಡಿಸುವ ಸಮಯದಲ್ಲಿ ಕೆಲವು ಸಲಹೆಗಳನ್ನು ನೀಡಿದ ಬಸವರಾಜ ಕಲ್ಗುಡಿಯವರನ್ನು ಇಲ್ಲಿ ಸ್ಮರಿಸುತ್ತೇನೆ.